ಪ್ರಮಾಣಪತ್ರಕ್ಕೆ ಲಗತ್ತು

ದಿನಾಂಕ**: 25.03.2025** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ನೀಡಲಾಯಿತು.

ಪಾಟೀ ಸವಾಲು ಪ್ರತಿವಾದಿ ಪರ ಶ್ರೀ ಎ ಬಿ ವಿ ಕೆ ವಕೀಲರಿಂದಃ-

ನಾನು ಹೂಡಿ, ಬೆಂಗಳೂರಿನಲ್ಲಿ ವಾಸವಾಗಿದ್ದೇನೆಂದರೆ ಸರಿಯಲ್ಲ. ನಾನು ಶಿಡ್ಲಘಟ್ಟದಲ್ಲಿ ವಾಸವಾಗಿದ್ದೇನೆ ಎಂದು ಹೇಳಲು ನ್ಯಾಯಾಲಯಕ್ಕೆ ಆಧಾರ್ ಕಾರ್ಡ್ ಅಥವಾ ರೇಷನ್ ಕಾರ್ಡನ್ನು ಸಲ್ಲಿಸಿದ್ದೀರಾ ಎಂದರೆ ಸಾಕ್ಷಿ ಸದರಿ ದಾಖಲೆಗಳು ಕ್ಯಾನ್ಸಲ್ ಆಗಿರುತ್ತವೆಂದು ಹೇಳುತ್ತಾರೆ. ನಾನು ಶಿಡ್ಲಘಟ್ಟದಲ್ಲಿ ವಾಸವಾಗಿದ್ದೇನೆಂದು ಹೇಳಲು **30** ವರ್ಷದ ಹಳೆಯ ರೇಷನ್ ಕಾರ್ಡ್ ಹಾಗೂ ಚುನಾವಣಾ ಗುರುತಿನ ಚೀಟಿ ಇರುತ್ತದೆ. ಸಾಕ್ಷಿ ದಾವಾ ಸ್ವತ್ತಿಗೆ ಸಂಬಂದಪಟ್ಟ ವಿದ್ಯುತ್ ಟ್ಟಕ್ತಿ ರಶೀದಿ ನನ್ನ ಹೆಸರಿನಲ್ಲಿ ಇರುತ್ತದೆಂದು ಹೇಳುತ್ತಾರೆ. ನಾನು ಕಳೆದ ಲೋಕಸಭಾ ಚುನಾವಣೆಯಲ್ಲಿ ಮತದಾನ ಮಾಡಿರುವುದಿಲ್ಲ. ಈಗ ಹಾಲಿ ಯಾವುದೇ ಚುನಾವಣಾ ಗುರುತಿನ ಚೀಟಿ ಇರುವುದಿಲ್ಲ. ಸಾಕ್ಷಿ ಹಳೆಯ ಚುನಾವಣಾ ಗುರುತಿನ ಚೀಟಿ ಇರುತ್ತದೆಂದು ಹೇಳುತ್ತಾರೆ. ನಾನು ಸುಮಾರು **05** ವರ್ಷಗಳಿಂದ ಮತದಾನ ಮಾಡಿರುವುದಿಲ್ಲ. ಸಾಕ್ಷಿ ನಾನು ರೇಷ್ಮೆ ಇಲಾಖೆಯಲ್ಲಿ ಕೆಲಸ ಮಾಡುತ್ತಿರುವುದರಿಂದ ನನ್ನನ್ನು ಚುನಾವಣಾ ಕೆಲಸಕ್ಕೆ ನೇಮಕ ಮಾಡುತ್ತಿದ್ದುದ್ದರಿಂದ ನಾನು ಮತ ಚಲಾವಣೆ ಮಾಡಲು ಸಾಧ್ಯವಾಗಿರುವುದಿಲ್ಲ ಎಂದ ಹೇಳುತ್ತಾರೆ.

**2.** ದಾವಾ ಸ್ವತ್ತು ಮೂಲ **1** ನೇ ಪ್ರತಿವಾದಿಯ ನರಸಮ್ಮ ರವರಿಗೆ ಮಂಜೂರಾದ ಸ್ವತ್ತು ಎಂದರೆ ಸರಿಯಲ್ಲ. ಸಾಕ್ಷಿ ನನಗೆ ಸರ್ಕಾರದಿಂದ ಮಂಜೂರಾಗಿರುತ್ತದೆಂದು ಹೇಳುತ್ತಾರೆ. ದಾವಾ ಸ್ವತ್ತನ್ನು **50** ವರ್ಷಗಳ ಹಿಂದೆ **1** ನೇ ಪ್ರತಿವಾದಿಗೆ ಮಂಜೂರಾಗಿರುತ್ತದೆಂದರೆ ಸರಿಯಲ್ಲ. ಸಾಕ್ಷಿ ನನ್ನ ತಂದೆ ಸರ್ಕಾರಿ ನೌಕರರಾಗಿದ್ದು ಅವರಿಗೆ **1975** ರಲ್ಲಿ ಮಂಜೂರಾಗಿರುತ್ತದೆಂದು ಹೇಳುತ್ತಾರೆ. ದಾವಾ ಸ್ವತ್ತು ಹಿಂದೆ ಪುರಸಭೆ ವ್ಯಾಪ್ತಿಯಲ್ಲಿದ್ದು ಈಗ ನಗರಸಭೆ ವ್ಯಾಪ್ತಿಗೆ ಬರುತ್ತದೆಂದರೆ ಸರಿ. **2010** ರಲ್ಲಿ **1** ನೇ ಪ್ರತಿವಾದಿ ದಾವಾ ಸ್ವತ್ತನ್ನು ರವೀಂದ್ರ ಕುಮಾರ್ ಎನ್ನುವವರಿಗೆ ಆಧಾರ ಮಾಡಿ ಸಾಲ ತೆಗೆದುಕೊಂಡಿರುತ್ತಾರೆಂದರೆ ಸರಿ. ಸದರಿ ಆಧಾರದ ದಾಖಲೆ ನೋಂದಣಿ ಆಗಿರುತ್ತದೆಂದರೆ ಸರಿ. **1** ನೇ ಪ್ರತಿವಾದಿ ನನ್ನ ತಾಯಿಯಾಗಿದ್ದು ಸದರಿ ಆಧಾರದ ದಾಖಲೆಗೆ ನಾನು ಸಹ ಸಹಿ

ಮಾಡಿರತ್ತೇನೆಂದರೆ ಸರಿ. ಸದರಿ ಆಧಾರವಾದ ದಾವಾ ಸ್ವತ್ತನ್ನು **2018** ರಲ್ಲಿ **2** ನೇ ಪ್ರತಿವಾದಿ ತಿರುವಳಿ ಮಾಡಿ ತಮ್ಮ ಹಾಗೂ **1** ನೇ ಪ್ರತಿವಾದಿ ಹೆಸರಿಗೆ ನೋಂದಾಯಿತ ಆಧಾರ ಬಿಡುಗೆ ಪತ್ರವನ್ನು ಮಾಡಿಸಿಕೊಂಡಿರುತ್ತಾರೆಂದರೆ ನನಗೆ ಗೊತ್ತಿಲ್ಲ. **2** ನೇ ಪ್ರತಿವಾದಿ **1** ನೇ ಪ್ರತಿವಾದಿಗೆ ಸೊಸೆ ಹಾಗೂ ಮೊಮ್ಮಗಳು ಆಗಿರುವುದರಿಂದ **1** ನೇ ಪ್ರತಿವಾದಿ ದಾವಾ ಸ್ವತ್ತನ್ನು **2** ನೇ ಪ್ರತಿವಾದಿಗೆ ನೋಂದಾಯಿತ ದಾನ ಪತ್ರದ ಮೂಲಕ ನೀಡಿರುತ್ತಾರೆಂದರೆ ನನಗೆ ಗೊತ್ತಿಲ್ಲ. ಸದರಿ ನೋಂದಾಯಿತ ದಾನ ಪತ್ರದ ಆಧಾರದ ಮೇಲೆ **2** ನೇ ಪ್ರತಿವಾದಿಯ ಹೆಸರಿಗೆ ದಾವಾ ಸ್ವತ್ತಿನ ಖಾತೆ ಆಗಿರುತ್ತದೆಂದರೆ ನನಗೆ ಗೊತ್ತಿಲ್ಲ.

**3.** ದಾವಾ ಸ್ವತ್ತು ನನ್ನ ತಾಯಿಯ ಸ್ವಯಾರ್ಜಿತ ಸ್ವತ್ತಾಗಿದ್ದರಿಂದ ಅದನ್ನು **2** ನೇ ಪ್ರತಿವಾದಿಗೆ ದಾನ ಪತ್ರದ ಮುಖಾಂತರ ನೀಡಿದ್ದು ಸದರಿ ದಾವಾ ಸ್ವತ್ತಿನಲ್ಲಿ ನನಗೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ **2** ನೇ ಪ್ರತಿವಾದಿ ಒಂದು ಭಾಗದಲ್ಲಿ ವಾಸವಾಗಿದ್ದು ಮತ್ತೊಂದು ಭಾಗವನ್ನು ಬಾಡಿಗೆಗೆ ನೀಡಿರುತ್ತಾರೆಂದರೆ ಸರಿಯಲ್ಲ. ಸಾಕ್ಷಿ ಸುಳ್ಳು ದಾಖಲೆಗಳನ್ನು ಸೃಷ್ಟಿ ಮಾಡಿ ಈಗಾಗಲೇ ದಾವಾ ಸ್ವತ್ತನ್ನು ಮಾರಾಟ ಮಾಡಿರುತ್ತಾರೆಂದು ಹೇಳುತ್ತಾರೆ. ದಾವಾ ಸ್ವತ್ತಿನಲ್ಲಿ ನನಗೆ ಯಾವುದೇ ಹಕ್ಕು ಸ್ವಾಧೀನ ಇಲ್ಲದೇ ಇದ್ದರೂ ಸಹ ಅದನ್ನು ಕಬಳಿಸುವ ಸಲುವಾಗಿ ಪ್ರತಿವಾದಿಯರಿಗೆ ತೊಂದರೆ ನೀಡುವ ಸಲುವಾಗಿ ಈ ಸುಳ್ಳು ದಾವೆಯನ್ನು ಹೂಡಿದ್ದೇನೆಂದರೆ ಸರಿಯಲ್ಲ. ನಾನು **2** ನೇ ಪ್ರತಿವಾದಿಯ ದಾವಾ ಸ್ವತ್ತಿನ ಹಕ್ಕು ಹಾಗೂ ಸ್ವಾಧೀನಕ್ಕೆ ತೊಂದರೆ ಉಂಟು ಮಾಡಿ ನಾನಾ ಇಲಾಖೆಗಳಿಗೆ ಅರ್ಜಿಗಳನ್ನು ನೀಡಿದ್ದು ಸದರಿ ಇಲಾಖೆಗಳಿಂದ ನನಗೆ ನೋಟೀಸು ಸಹ ಬಂದಿರುತ್ತದೆಂದರೆ ಸರಿಯಲ್ಲ.

**4.** ನಾನು ಹೂಡಿ, ಬೆಂಗಳೂರಿನಲ್ಲಿ ಸುಮಾರು **15** ವರ್ಷಗಳಿಂದ ವಾಸವಾಗಿದ್ದರೂ ಸಹ ಶಿಡ್ಲಘಟ್ಟದಲ್ಲಿ ವಾಸವಾಗಿದ್ದೇನೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ದಾವಾ ಸ್ವತ್ತಿಗೆ ಸಂಬಂದಪಟ್ಟ ಎಲ್ಲಾ ದಾಖಲೆಗಳು ಈಗಲೂ ಸಹ **2** ನೇ ಪ್ರತಿವಾದಿ ಹೆಸರಿನಲ್ಲಿ ಇರುತ್ತವೆಂದರೆ ಸರಿಯಲ್ಲ.

**(**ಮುಂದುವರಿ **ಪಾಟೀ ಸವಾಲಿಗೆ ಪ್ರತಿವಾದಿ ಪರ ವಕೀಲರು ಕಾಲಾವಕಾಶ ಕೋರಿದ್ದು ಪಾಟೀ ಸವಾಲಿಗೆ ಕಾಲಾವಕಾಶ ನೀಡಲಾಯಿತು.)**

**(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)**

ಓ. ಹೇ. ಕೇ. ಸರಿ ಇದೆ.

ಸಹಿ/-
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ., ಶಿಡ್ಲಘಟ್ಟ.